ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ: ಹೈ.ಕ.ಪ್ರ.ಅ.ಮಂ./ಸಾಮಾನ್ಯ/46/2017–18 /1188 ದಿನಾಂಕ: 23–08–2017

## –: ಸುತ್ತೋಲೆ: –

ವಿಷಯ : ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧ್ಧಿ ಮಂಡಳಿಯ ಅನುದಾನದಲ್ಲಿ ಸಾಮೂಹಿಕ ಶೌಚಾಲಯಗಳನ್ನು ಇನ್ನು ಮುಂದೆ ತೆಗೆದುಕೋಳ್ಳದೆ ಇರುವ ಕುರಿತು.

***

ಹೈ.ಕ.ಪ್ರ.ಅ.ಮಂಡಳಿಯ ಅನುದಾನದಿಂದ ಕೈಗೊಳ್ಳಲಾಗುತ್ತಿರುವ ಸಾಮೂಹಿಕ ಶೌಚಾಲಯಗಳು ಅನೇಕ ಕಡೆ ನಿವೇಶನತೊಂದರೆಯಿಂದ ಪ್ರಾರಂಭವಾಗದೇ ಇರುವುದು ಅಥವಾ ಪ್ರಾರಂಭವಾದ ನಂತರ ಸ್ಥಳೀಯ ಅಕ್ಕ-ಪಕ್ಕ ಜನರ ತಕರಾರಿನಿಂದ ಕಾಮಗಾರಿಗಳು ಪೂರ್ಣವಾಗದೇ ಇರುವುದು ಗಮನಿಸಲಾಗಿದೆ.

ಸ್ವಚ್ಛ ಭಾರತ ಮಿಷನ್ (ಸ್ವ.ಭಾ.ಮಿ.) ಅಡಿಯಲ್ಲಿ ಗ್ರಾಮಗಳಲ್ಲಿ ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸುವ ಅವಕಾಶ ಇರುತ್ತದೆ. ಸ್ವ.ಭಾ.ಮಿ. ಮಾರ್ಗ ಸೂಚಿಗಳನ್ನು ಹೊರತು ಪಡಿಸಿ ನೇರವಾಗಿ ಹೈ.ಕ.ಪ್ರ.ಅ.ಮಂಡಳಿಯ ಅನುದಾನದಿಂದ ಸಾಮೂಹಿಕ ಶೌಚಾಲಯಗಳ ನಿರ್ಮಾಣವನ್ನು ಹೆಚ್ಚಿನ ಘಟಕ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವುದಲ್ಲಿ ಸ್ವ.ಭಾ.ಮಿ. ಯೋಜನೆಯಲ್ಲಿ ಈ ಕಾರ್ಯಕ್ರಮದ ಪ್ರಗತಿ ಕುಂಠಿತ ಆಗುವುದು ಅಲ್ಲದೆ ಈ ಘಟಕಗಳ ನಿರ್ವಹಣೆ ಪ್ರಶ್ನಾರ್ಥಿಕವಾಗುವ ಸಾಧ್ಯತೆ ಇರುತ್ತದೆ. ಇದು ಅಲ್ಲದೆ ಸ್ವ.ಭಾ.ಮಿ. ಯೋಜನೆಯ ಮುಖ್ಯ ಕಾರ್ಯಕ್ರಮ ಅಂದರೆ ವೈಯಕ್ತಿಕ ಶೌಚಾಲಯ ನಿರ್ಮಾಣದ ಗುರಿ ಮತ್ತು ಸಾಧನೆಗೆ ವ್ಯತರಿಕ್ತ ಪರಿಣಾಮ ಬೀಳುವ ಸಾಧ್ಯತೆಗಳು ಸಹ ಇರುತ್ತದೆ.

ಆದುದರಿಂದ, ಹೈ.ಕ.ಪ್ರ.ಅ.ಮಂಡಳಿಯ ಅನುದಾನದಿಂದ ಸಾಮೂಹಿಕ ಶೌಚಾಲಯಗಳ ನಿರ್ಮಾಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಈಗಾಗಲೇ ಮಂಜೂರಾಗಿರುವ ಸಾಮೂಹಿಕ ಶೌಚಾಯಲಗಳು ಪ್ರಾರಂಭಿಸದೆ ಇದ್ದಲ್ಲಿ ಅವುಗಳನ್ನು ಕೈಬಿಡಲು ಕ್ರಮ ಕೈಗೊಳ್ಳುವುದು ಹಾಗೂ ಮಂಡಳಿಗೆ ಮಾಹಿತಿಯನ್ನು ಸಲ್ಲಿಸುವುದು.

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ.

**ಇವರಿಗೆ,**

1) ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ. ವಿಭಾಗ.
2) ಎಲ್ಲಾ ಮುಖ್ಯ ಕಾರ್ಯ ನಿರ್ವಾಹಣ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಹೈ.ಕ. ವಿಭಾಗ.

**ಪ್ರತಿಯನ್ನು :**

1) ಹೈ.ಕ. ವಿಭಾಗದ ಎಲ್ಲಾ ಜಿಲ್ಲೆಗಳ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಹೈ.ಕ. ವಿಭಾಗದ ಎಲ್ಲಾ ಜಿಲ್ಲೆಗಳ ಮಾನ್ಯ ವಿಧಾನ ಸಭೆಯ ಸದಸ್ಯರು, ರವರ ಮಾಹಿತಿಗಾಗಿ ಸಲ್ಲಿಸಿದೆ.

26/8